ಸಿದ್ದರಾಮೋತ್ಸವ ವಿವಾದ



ನೀವು 1947ರಲ್ಲಿ ಹುಟ್ಟಿದ್ದು ನಮ್ಮ ಪಕ್ಷದ ಪುಣ್ಯ!

ಕಡಲ್ಕೊರೆತಕ್ಕೆ ಕಾಂಡ್ಲಾ ಗಿಡ ಬೆಳೆಸಲು ಸಲಹೆ



ವೈಜ್ಞಾನಿಕವಾದರೂ ಅನುದಾನಕ್ಕೆ ಕಲ್ಲು ಹಾಕುವ ಸಲಹೆ ಇದು! ಇಂಥ ಶಾಶ್ವತ ಪರಿಹಾರ ಬೇಡ!

**ಹೆಂಡತಿ:** ರೀ... ಮಾರ್ಕೆಟ್ಟಿಗೆ ಹೋಗುವಾಗ ಛತ್ರಿ ತೆಗೆದುಕೊಂಡು ಹೋಗಿದ್ರಲ್ಲ, ಎಲ್ಲಿ ಬಿಟ್ಟು ಬಂದ್ರಿ?
**ಗುಂಡ:** ಅಯ್ಯೋ ನಾನೆಲ್ಲೂ ಬಿಟ್ಟು ಬಂದಿಲ್ಲ ಕಣೇ. ಯಾವ್ನೊನೋ ಛತ್ರಿ ನನ್ಮಗ ಕದ್ದುಬಿಟ್ಟಿದ್ದಾನೆ!

***

**ಗೆಳೆಯ:** ಗಂಡು ಹುಡುಗರು ಮದುವೆ ಆಗಿದ್ದಾರಾ ಇಲ್ಲವಾ ಅಂತ ಕಂಡುಹಿಡಿಯುವುದು ಹೇಗೆ?
**ಗುಂಡ:** ಸುಂದರ ಹುಡುಗಿಯರನ್ನು ಆಸೆಯಿಂದ ನೋಡುವವರು ಅವಿವಾಹಿತರು. ನಿರಾಸೆಯಿಂದ ನೋಡುವವರು ವಿವಾಹಿತರು!

***

**ಗೆಳೆಯ:** ಗಂಡ ಹೆಂಡತಿ ಒಟ್ಟಿಗೆ ಸುಮಾರು 50 ವರ್ಷ ಜತೆಯಾಗಿ ಬಾಳಿದವರನ್ನು ಕಂಡರೆ ನಿನಗೇನನ್ನಿಸುತ್ತೆ?
**ಗುಂಡ:** ಆ ಗಂಡನ ಬಗ್ಗೆ ತುಂಬಾ ಕನಿಕರ ಮೂಡುತ್ತೆ!

***

**ಅರ್ಚಕ:** ಸರ್... ನಿಮ್ಮ ಹೆಸರಿನಲ್ಲಿ ಪುಷ್ಪಾರ್ಚನೆ ಮಾಡಿಸ್ಲಾ? ಅಥವಾ ಅಕ್ಷತೆಯ ಅರ್ಚನೆ ಮಾಡಿಸ್ಲಾ?
**ಗುಂಡ:** ಯಾವ ಅರ್ಚನೆಯೂ ಬೇಡ. ಎಲ್ಲವೂ ಮನೆಯಲ್ಲೇ ಆಯ್ತು?
**ಅರ್ಚಕ:** ಮನೆಯಲ್ಲಿ ಅಂತದ್ದು ಏನಾಯ್ತು?
**ಗುಂಡ:** ಉಗುಳಾರ್ಚನೆ!

***

**ಅಂಚೆಪೇದೆ:** ಸರ್ ಟೆಲಿಗ್ರಾಂ...
**ಗುಂಡ:** (ಟೆಲಿಗ್ರಾಂ ಓದಿ ಖುಷಿಯಿಂದ ಮನೆಯಲ್ಲಿದ್ದ ಸ್ವೀಟ್ ತಂದು) ತಗೊಳ್ಳಯ್ಯಾ ಮೈಸೂರ್ ಪಾಕ್.
**ಅಂಚೆಪೇದೆ:** ಏನ್ ಸರ್ ಸಿಹಿ ಸುದ್ದಿ? ಸ್ವೀಟ್ ಕೊಡ್ತಾ ಇದ್ದೀರಿ?
**ಗುಂಡ:** ಹೌದಯ್ಯಾ! ನಿನ್ನೆ ತವರಿಗೆ ಹೋಗಿದ್ದ ನನ್ನ ಹೆಂಡತಿ ಇನ್ನೂ ಒಂದ್ ವಾರ ಬಿಟ್ಟು ವಾಪಸ್ ಬರ್ತಾಳಂತೆ!

***

**ಪೊಲೀಸ್:** ಹಗ್ಗ ತೆಗೆದುಕೊಂಡು ಎಲ್ಲಿಗೆ ಹೋಗ್ತಾ ಇದ್ದೀಯ?
**ಗುಂಡ:** ಜೀವನಾನೇ ಜಿಗುಪ್ಸೆಗೊಂಡಿದೆ. ಅದ್ಕೆ ನೇಣು ಹಾಕಿಕೊಳ್ಳೋಕೆ ಹೋಗ್ತಾ ಇದೀನಿ.
**ಪೊಲೀಸ್:** ಮದುವೆಯಾಗಿದ್ಯಾ?
**ಗುಂಡ:** ಹು... ಆಗಿದೆ.
**ಪೊಲೀಸ್:** ಹಾಗಾದ್ರೆ ಎಲ್ಲಿಗೊ ಹೋಗ್ತಾ ಇದ್ಯಲ್ಲ. ಅಲ್ಲಿಗೆ ಬೇಗ ಹೋಗು!

***

**ಹೆಂಡತಿ:** ರೀ... ನಿನ್ನೆ ನೀವು ಸಿಕ್ಕಾಪಟ್ಟೆ ಕುಡಿದಿದ್ರಿ.
**ಗುಂಡ:** ಅಯ್ಯೋ ಇಲ್ವಲ್ಲೇ! ಸ್ವಲ್ಪಾನೆ ಕುಡಿದಿದ್ದು.
**ಹೆಂಡತಿ:** ಮತ್ತೆ ಯಾಕೆ ನೀರು ತೊಟ್ಟಿಕ್ಕುವ ನಲ್ಲಿಯ ಮುಂದೆ ನಿಂತುಕೊಂಡು 'ಅಳಬೇಡಾ ಕಣೇ! ನಾನಿದ್ದೀನಿ' ಅಂತಿದ್ರಿ?

***

**ಪ್ರವಾಸಿ:** ಏನಯ್ಯಾ... ದೋಣಿಯನ್ನು ಸಿಕ್ಕಾಪಟ್ಟೆ ಜೋರಾಗಿ ಓಡಿಸ್ತಿದ್ದೀಯ. ಏನಾದ್ರು ಹೆಚ್ಚು ಕಮ್ಮಿಯಾದರೆ ಏನು ಗತಿ?
**ಅಂಬಿಗ:** ಚಿಂತಿಸಬೇಡಿ ಸರ್! ನನಗೆ ಈಜು ಬರುತ್ತೆ.

***

**ಟೀಚರ್:** ಸಂಸ್ಕೃತ ಭಾಷೆಯಲ್ಲಿ ಹೆಂಡತಿಗೆ ಏನು ಹೇಳುತ್ತಾರೆ?
**ಗುಂಡ:** ಸಂಸ್ಕೃತ ಭಾಷೆಯಲ್ಲಿ ಮಾತ್ರವಲ್ಲ, ಬೇರೆ ಯಾವ ಭಾಷೆಯಲ್ಲೂ ಹೆಂಡ್ತಿಗೆ ಏನನ್ನೂ ಹೇಳಲಿಕ್ಕೆ ಆಗುವುದಿಲ್ಲ!

***

**ಗುಂಡ:** ಹುಡುಗಿಯರಿಗಾಗಿ ನಾನು ಕಾಯುವ ಬದಲು ಅವರೇ ನನಗಾಗಿ ಕಾಯಲು ಉಪಾಯವೇನು?
**ಗುರುಗಳು:** ನಾಳೆಯಿಂದಲೇ ಆಟೊ ಓಡಿಸಲು ಪ್ರಾರಂಭಿಸು!

***

**ಪತ್ರಕರ್ತ:** ನಿಮ್ಮ ಸಾಧನೆ ಬಗ್ಗೆ ಎಲ್ಲರಿಗೂ ಹೆಮ್ಮೆಯಿದೆ. ನಿಮ್ಮನ್ನು ಭಾರತ ಮಾತೆಯ ಪುತ್ರಿ ಅಂತ ಹೇಳ್ತಾರೆ. ಇದರ ಬಗ್ಗೆ ನಿಮ್ಮ ಅನಿಸಿಕೆ ಏನು?
**ನಟಿ:** ಇದನ್ನು ನಾನು ಒಪ್ಪುವುದಿಲ್ಲ. ನಾನು ಮಂಗಮ್ಮನ ಪುತ್ರಿ!

ಸಂಗ್ರಹ: **ಎಂ.ಕೆ. ಮಂಜುನಾಥ್,**
**ಬೆಂಗಳೂರು**

## ಹಾಳಾಗಲು ಉಪದೇಶ

**ಸುಬ್ಬ:** ಜೀವನದಲ್ಲಿ ಹಾಳಾಗೋದಕ್ಕೆ ಇರುವ ಯಾವುದಾದರೂ ಒಂದು ದಾರಿ ಅಥವಾ ಉಪಾಯ ಹೇಳಯ್ಯಾ.
**ಗುಂಡ:** ಅದು ಸಿಂಪಲ್ ಕಣಯ್ಯಾ... 'ಹಾಳಾಗ್ದೆ ಇರೋದಕ್ಕೆ ಏನ್ ಮಾಡ್ಬೇಕು ಅಂತ ಯೋಚನೆ ಮಾಡು ಅಷ್ಟೇ ಸಾಕು'.

***

## ಗುಂಡನ ಅಭಿಪ್ರಾಯ

(ಕಲಾಕ್ಷೇತ್ರದ ಸಂಗೀತ ಕಾರ್ಯಕ್ರಮ ಮುಗಿದ ನಂತರ ಹೊರಗೆ ಬರುತ್ತಿದ್ದ ಎಲ್ಲ ಜನರನ್ನೂ ಕಾರ್ಯಕ್ರಮದ ಬಗ್ಗೆ ಅಭಿಪ್ರಾಯ ಕೇಳ್ತಾ ಇದ್ರು. ಹಾಗೆಯೇ ಗುಂಡನನ್ನೂ ಆಯೋಜಕರು ಕೇಳಿದರು)
**ಆಯೋಜಕ:** ಸಂಗೀತ ಕಾರ್ಯಕ್ರಮ ಹೇಗೆ ಅನಿಸಿತು ಅಂತ ಪ್ರಾಮಾಣಿಕವಾಗಿ ಹೇಳಿ ಸರ್!
**ಗುಂಡ:** ಪ್ರಾಮಾಣಿಕವಾಗಿ ಹೇಳಬೇಕು ಅಂದರೆ, 'ಹೊರಗಡೆ ತುಂಬಾ ಮಳೆ ಬರ್ತಾ ಇತ್ತು. ಅದಕ್ಕೆ ಇಲ್ಲಿ ಬಂದು ಕೂತೆ. ಹೊರಗಡೆಯ ಮಳೆಗೂ ಈ ಕಾರ್ಯಕ್ರಮಕ್ಕೂ ಯಾವುದೇ ವ್ಯತ್ಯಾಸ ಇದೆ ಅಂತ ನನಗೆ ಅನಿಸಲಿಲ್ಲ.

***

## ಡೈರೆಕ್ಟ್ ಆಸ್ಪತ್ರೆಗೆ

**ಗುಂಡ:** (ಹಳ್ಳಿಯಿಂದ ಬಂದಿದ್ದ) ತುಂಬಾ ಅರ್ಜೆಂಟ್ ಆಗಿ ಆಸ್ಪತ್ರೆಗೆ ಹೋಗಬೇಕು. ಎಲ್ಲಿ ನಿಂತುಕೊಳ್ಳಬೇಕು ಸರ್?
**ತರ್ಲೆ ಸುಬ್ಬ:** ಓಹ್ ಅಷ್ಟೇನಾ? ಅಗೋ ಅಲ್ಲಿ ಎದುರುಗಡೆ ಇರುವ ಎಲೆಕ್ಟ್ರಾನಿಕ್ ಸಿಟಿ ಫ್ಲೈಓವರ್ ರಸ್ತೆಯಲ್ಲಿ ನಿಂತ್ಕೊ. ಯಾರಾದ್ರು ಡೈರೆಕ್ಟ್ ಆಗಿ ಆದಷ್ಟು ಬೇಗ ಆಸ್ಪತ್ರೆಗೆ ತಲುಪಿಸ್ತಾರೆ!

***

## ಮಾತು ಬಿಡುವುದೇ ವಿಚ್ಛೇದನ

**ಗುಂಡ:** ಹೆಂಡತಿಯಿಂದ ವಿಚ್ಛೇದನ ಕೊಡಿಸಿ .
**ವಕೀಲರು:** ವಿಚ್ಛೇದನ ಬೇಕು ಅಂದ್ರೆ ನಿನ್ನ ಹೆಂಡತಿ ವಿರುದ್ಧ ಬಲವಾದ ಕಾರಣ ಇರಬೇಕು.
**ಗುಂಡ:** ಎರಡು ತಿಂಗಳಿಂದ ಅವಳು ನನ್ನ ಜೊತೆ ಮಾತಾಡ್ತಿಲ್ಲ. ಅದಕ್ಕಿಂತ ಬಲವಾದ ಕಾರಣ ಬೇಕಾ ಸ್ವಾಮಿ.
**ವಕೀಲರು:** ಭಾರೀ ಅದೃಷ್ಟವಂತ ಕಣಯ್ಯಾ ನೀನು. ಹೆಂಡತಿ ನಿನ್ನ ಜೊತೆ ಮಾತಾಡುತ್ತಿಲ್ಲ ಅನ್ನುವುದೇ ವಿಚ್ಛೇದನ. ಕೋರ್ಟಿನಿಂದ ಏನಕ್ಕೆ ವಿಚ್ಛೇದನ. ಈಗಿನ ಕಾಲದಲ್ಲಿ ಯಾರಿಗೆ ಇಂಥ ಭಾಗ್ಯ ಸಿಗುತ್ತೆ ಹೇಳು? ಸುಮ್ಮನೆ ನೀನೂ ಮಾತಾಡದೆ ತೆಪ್ಪಗೆ ಇರು.

ಸಂಗ್ರಹ: **ಮನೋಜ್ ಆರ್.**
**ಕೋಲಾರ**